ಈ ಅಭಿಪ್ರಾಯಗಳ ಹಿನ್ನಲೆಯಲ್ಲಿ ನೋಡಿದಾಗ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಮಾನ್ಯ ಸದಸ್ಯರುಗಳ ನಡುವೆ ಸಭಾಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ನಡೆದ ಮಾತುಕತೆ ದಾಖಲಾತಿಗಳ ಭಾಗವಾಗುದಿಲ್ಲ, ಆದಕಾರಣ, ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರ ಸೂಚನೆ ಹಕ್ಕುಚ್ಯತಿಯಾಗುದಿಲ್ಲ.

ಸದನದ ನಡವಳಿಕೆ ಸಂಬಂಧಿಸಿದ ವಿಚಾರಗಳನ್ನು ವರದಿ ಮಾಡುವಾಗ ಮಾಧ್ಯಮದ ಪ್ರತಿನಿಧಿಗಳು ಜಾಗರೂಕರಾಗಿರಬೇಕು. ತಮ್ಮ ಚಾತುರ್ಯವನ್ನು ನಿಗದಿತ ಚೌಕಟ್ಟಿನೊಳಗೇ ಪ್ರದರ್ಶಿಸಬೇಕು. ಯಾವದೇ ಕಾರಣಕ್ಕೂ ಮೇರೆ ಮೀರಬಾರದು, ಮೀರಿದರೆ ಸದನದ ಅವಕೈಪೆಗೆ ಪಾತ್ರರಾಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಬಹು ದಿವಸಗಳ ನಂತರದ ತೀರ್ಪು ಬಂತು. ಇದು ಕೊನೆಯ ತೀರ್ಪೆ ಹಾಗೆ ಎಂದು ನಮಗೆ ಅನ್ನಿಸುತ್ತದೆ. ಈ ತೀರ್ಪನ್ನು ಕೊಡಬೇಕಾದರೆ ತಮ್ಮ ತೀರ್ಪನ್ನು ಪ್ರಶ್ನೆ ಮಾಡುವುದಕ್ಕೆ ನಮಗೆ ಹಕ್ಕು ಇಲ್ಲ. ಇವತ್ತು ಈ ತೀರ್ಪನ್ನು ಕೊಡೋಣ ಎಲ್ಲಾ ಕೆಲಸಕಾರ್ಯಗಳನ್ನು ಇವತ್ತು ಮುಗಿಸೋಣವೆನ್ನುವ ನಿರ್ಧಾರಕ್ಕೆ ತಾವೇನಾದರೂ ಬಂದಿದ್ದೀರಾ?

ಅಧ್ಯಕ್ಷರು: ಯಾವುದನ್ನು ಪೆಂಡಿಂಗ್ ಇಟ್ಟುಕೊಳ್ಳಬಾರದೆನ್ನುವ ಉದ್ದೇಶದಿಂದ ತೀರ್ಪು ಕೊಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ತಮ್ಮಂತಹ ಅಧ್ಯಕ್ಷರನ್ನು ಪಡೆದದ್ದು ನಮ್ಮ ಸೌಭಾಗ್ಯ. ಮುಂದೆಯೂ ಸಹ ತಾವು ಅಧ್ಯಕ್ಷರಾಗಿ ಬರಬೇಕು ಎಂದು ಈ ಮನೆಯ ಅಪೇಕ್ಷೆ.

ತಾವು ತಮ್ಮನ್ನು ಬಿಟ್ಟು ಹೋಗಬೇಕು ಎನ್ನತಕ್ಕಂಥ ಯೋಚನೆ ಏನಾದರೂ ಮಾಡಿದ್ದೀರಾ ಎನ್ನತಕ್ಕಂಥ ಮನೋವ್ಯಥೆ ನಮ್ಮನ್ನು ಕಾಡುತ್ತಾ ಇದೆ.

ನಗರದಲ್ಲಿ ಹಾಲಿನ ಕೊರತೆ ಹಾಗೂ ಹಾಲಿನ ಬೆಲೆಯನ್ನು ಹೆಚ್ಚು ಮಾಡುವ ಬಗ್ಗೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್ ಅವರು ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅವರ ಜೊತೆಯಲ್ಲಿ ನಾನು ಸಹಿತ ಧ್ವನಿಗೂಡಿಸುತ್ತೇನೆ. ಅವರ ಅಭಿಪ್ರಾಯವನ್ನು ನಾನು ಸಹಿತ ಅಭಿಮಾನದಿಂದ ಒಪ್ಪುತ್ತೇನೆ. ಈಗ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ ಬೆಳಿಗ್ಗೆ ಬಯಸಿದ್ದೆ. ಮಾನ್ಯ ಸಚಿವರು ದಯವಿಟ್ಟು ಇದರ ಬಗ್ಗೆ ತಕ್ಷಣ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಹಾಲಿನ ಕೊರತೆ ಇದೆಯೆಂದು ಹೇಳಿ, ಅದಕ್ಕೋಸ್ಕರ ನಾವು ಬೆಲೆ ಜಾಸ್ತಿ ಮಾಡಬೇಕೆಂದು ಮಾಡಿದಾಗ ಅದನ್ನು ನಾನು ಸ್ವಾಗತ ಮಾಡಿದ್ದೆವು. ಏಕೆಂದರೆ ರೈತರಿಗೆ ಅನುಕೂಲವಾಗುತ್ತದೆ ಮತ್ತು ಅವರು ಬಳಸತಕ್ಕಂಥ ಹಿಂಡಿ, ಬೂಸಾ, ಮತ್ತೊಂದೆಲ್ಲ , ಜಾಸ್ತಿಯಾಗಿದ್ದರಿಂದ ನೀವು ಮಾಡಬೇಕೆಂದು ರೈತರ ಪರವಾಗಿ ಕೇಳಿಕೊಂಡಿದ್ದೆವು. ಆ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳಿಕೆ ಕೊಟ್ಟ ಮಂತ್ರಿಗಳು ಹಾಲಿನ ಕೊರತೆ ಇದೆಯೆಂದು ಹೇಳಿದ್ದರು. ಈಗ ಏನಾಗಿದೆ ಎಂದರೆ, ಇದನ್ನು ತಿಳಿದುಕೊಂಡು ನೀಲ್‌ಗಿರೀಸ್ ಅಂಥ ದೊಡ್ಡದೊಡ್ಡ ಡೈರಿಗಳು ಇವರೆಲ್ಲಾ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿಬಿಟ್ಟಿದ್ದಾರೆ. ಬೆಂಗಳೂರು ಡೈರಿಯಲ್ಲಿ ಸರ್ಕಾರ ಕೊಡತಕ್ಕಂಥ ಸಂಬಳ, ಎಲ್ಲಾ ಕೊಟ್ಟು, ಓವರ್ ಹೆಡ್ ಚಾರ್ಜಸ್ ಕಳೆದು ಐದೂವರೆ ರೂಪಾಯಿ ಒಂದು ಲೀಟರ್‌ಗೆ ಇದೆ. ಆದರೆ ಅವರು ಏಳು-ಏಳೂವರೆ ರೂಪಾಯಿಗೆ ಹಾಲು ಮಾರಾಟ ಮಾಡುತ್ತಿದ್ದಾರೆ. ಮತ್ತೆ ಜನರು ಯಾರಾದರೂ ಅವರ ಹತ್ತಿರ ಹೋದರೆ ಬಹಳ ಕೆಟ್ಟದಾಗಿ ನಡೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ನಾನು ಕೇಳತಕ್ಕದ್ದು ಏನೆಂದರೆ, ಪ್ರತಿದಿನ ಬೆಂಗಳೂರಿನಿಂದ ಕಲ್ಕತ್ತಾಗೆ ಕೆ.ಎಂ.ಎಫ್.ನಿಂದ

ಹಾಲನ್ನು ಕಳುಹಿಸುತ್ತಿದ್ದಾರೆ ಕಲ್ಕತ್ತಾಗೆ ಹೋಗತಕ್ಕಂಥ ಈ ಹಾಲನ್ನು ಬಂದ್ ಮಾಡಿದರೆ ಬೆಂಗಳೂರಿನ ನಾಗರೀಕರಿಗೆ ಮತ್ತು ಬೆಂಗಳೂರಿನ ಸುತ್ತಮುತ್ತಲಿನ ನಮ್ಮ ಜನಕ್ಕೆ ಹಾಲು ಸಿಗುತ್ತದೆ. ಆದ್ದರಿಂದ ಕಲ್ಕತ್ತಾಗೆ ಕಳಿಸುತ್ತಿರುವ ಹಾಲನ್ನು ನಿಲ್ಲಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಹಾಲಿನ ವಿಚಾರದಲ್ಲಿ ಮೊದಲಿನಿಂದಲೂಕೂಡ ಬೆಲೆ ಹೆಚ್ಚು ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಲೇ ಬಂದೆ. ಒಂದು ಹಂತದಲ್ಲಂತೂ ನಾನು ಈ ಸಾಮಗ್ರಿಗಳ ಬೆಲೆಯೇರಿಕೆ ಕಾರಣ ರೈತರು ಹಸುಗಳನ್ನು ಮಾರಾಟ ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನೂ ನಾನು ಹೇಳಿದೆ. ಆದರೆ ಸರ್ಕಾರ ಆಗ ನಾನು ಹೇಳಿದಂಥ ಮಾತಿಗೆ ಬೆಲೆಯನ್ನು ಕೊಡಲಿಲ್ಲ, ಮತ್ತೆ ಹಾಲಿನ ಬೆಲೆಯನ್ನು ಕೂಡ ಹೆಚ್ಚಿಸಲಿಲ್ಲ. ಆದ್ದರಿಂದ ಏನಾಯಿತು ಎಂದರೆ, ಮೇವಿಲ್ಲದೆ ಅನೇಕ ಕಡೆ ಹಸುಗಳು ಸತ್ತು ಹೋದವು ಮತ್ತು ಬೇರೆ ರಾಜ್ಯಗಳಿಗೆ ಹಸುಗಳು ಹೊರಟು ಹೋದವು. ಇದರ ಪರಿಣಾಮ ಏನಾಗಿದೆ ಎಂದರೆ ಹಾಲಿನ ಉತ್ಪಾದನೆ ಎಷ್ಟು ಆಗಬೇಕಿತ್ತೋ, ಅಷ್ಟು ಉತ್ಪಾದನೆ ಆಗುತ್ತಿಲ್ಲ. ಈಗ ಹಾಲಿನ ಕೊರತೆಯನ್ನು ನಾವು ಅನುಭವಿಸುತ್ತಿದ್ದೇವೆ. ಈಚೆಗೆ ಹಾಲಿನ ಬೆಲೆಯನ್ನು ಕೂಡ ಹೆಚ್ಚಿಗೆ ಮಾಡಿದ್ದಾರೆ. ಆದರೆ ಅದರ ಪರಿಸ್ಥಿತಿ ಏನಾಗಿದೆ ಎಂದರೆ, ನೀವೇನೋ ಲೀಟರ್‌ಗೆ 40–50 ಪೈಸೆ ಹೆಚ್ಚಿಗೆ ಮಾಡಿದಿರಿ. ಅದಾದಮೇಲೆ ಇದು ಈಗ ಬ್ಯಾಲೆನ್ಸ್ ಆಗಿಬಿಟ್ಟಿದೆ. ಎಲ್ಲಾ ಬೆಲೆಗಳೂ ಜಾಸ್ತಿಯಾಗಿವೆ ಇದರಿಂದಾಗಿ ಈ ಉತ್ಪಾದಕರಿಗೆ ಏನು ಹೆಚ್ಚಿಗೆ ಕೊಡಬೇಕಾಗಿತ್ತು, ಅವರಿಗಂತೂ ಲಾಭ ಯಾವುದು ಕೂಡ ಸಿಗುತ್ತಿಲ್ಲ. ಇದನ್ನು ನಾನು ಪುನಃ ಒತ್ತಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ತಕ್ಷಣ ಹಾಲಿನ ಬೆಲೆಯನ್ನು ಹೆಚ್ಚು ಮಾಡದೇ ಇದ್ದರೆ, ಪುನಃ ಹಾಲಿನ ಭೀಕರವಾದ ಕ್ಷಾಮ ರಾಜ್ಯದಲ್ಲಿ ಉದ್ಭವವಾಗುತ್ತದೆ. ಈಗಾಗಲೇ ನಾನು ಹೇಳಿದಂತೆ, ಆಗಲೇ ಹಾಲಿನ ಬೆಲೆ ಜಾಸ್ತಿ ಮಾಡಿದ್ದರೆ ಇವತ್ತು ಹಾಲಿನ ಕ್ಷಾಮ ಉಂಟಾಗುತ್ತಿರಲಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮುಂದೆ ಬರಬಹುದಾದ ಹಾಲಿನ ಕ್ಷಾಮವನ್ನು ತಡೆಗಟ್ಟಬೇಕಾದರೆ ಹಾಲಿನ ಬೆಲೆಯನ್ನು ತಕ್ಷಣ ಹೆಚ್ಚಿಸಬೇಕಾದದ್ದು ಬಹಳ ಅವಶ್ಯಕತೆ ಇದೆ. ಇಲ್ಲದಿದ್ದರೆ ಈಗಲೂ ಕೂಡ ರೈತರು ಹಸುಗಳನ್ನು ಮಾರಾಟ ಮಾಡುತ್ತಿದ್ದಾರೆ, ಎಮ್ಮೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಅನೇಕ ಸಂದರ್ಭದಲ್ಲಿ ನನ್ನ ಕಣ್ಣಲ್ಲಿ ನೀರು ಬರುತ್ತದೆ. ಅವೆಲ್ಲವೂ ಕೂಡ ಕೇರಳಕ್ಕೆ, ಬೆಂಗಳೂರಿನಲ್ಲಿರತಕ್ಕಂಥ ಸ್ಲಾಟರ್ ಹೌಸ್‌ಗೆ ಬರತಕ್ಕಂಥ ದೃಶ್ಯವನ್ನು ಪ್ರತಿಯೊಂದು ರಸ್ತೆಯಲ್ಲೂ ಕಾಣಬಹುದು. ನಾನು ಒಬ್ಬ ರೈತನಾಗಿರುವುದರಿಂದ, ನಾವು ಗೋವನ್ನು, ಎತ್ತುಗಳನ್ನು ನಂಬಿ ಬದುಕುತ್ತಾ ಇರತಕ್ಕಂಥವರು. ನಮ್ಮ ಪ್ರಾಣ ಎಷ್ಟು ಮುಖ್ಯವೋ ಅವುಗಳ ಪ್ರಾಣವೂ ಅಷ್ಟೇ ಮುಖ್ಯವೆಂದು ನಂಬಿರತಕ್ಕವರು ನಾವು. ಇಂತಹ ಹಸು, ಎಮ್ಮೆಗಳು ಇವತ್ತು ಸ್ಲಾಟರ್ ಹೌಸ್‌ಗೆ ಹೋಗುತ್ತಿವೆ, ಕೇರಳ ರಾಜ್ಯಕ್ಕೆ ಹೋಗುತ್ತಿವೆ. ಇದರಿಂದ ಹಸುಗಳ ಸಂಖ್ಯೆ ಕಡಿಮೆಯಾಗುತ್ತಿದೆ ಮತ್ತು ಗ್ರಾಹಕರಿಗೆ ಹಾಲು ಸಿಗುತ್ತಿಲ್ಲ, ರೈತರಿಗೆ ಕಷ್ಟವಾಗುತ್ತಿದೆ. ಈ ದೃಷ್ಟಿಯಿಂದ ಸರ್ಕಾರ ತೀವ್ರವಾಗಿ ಈಗಲಾದರೂ ಆಲೋಚನೆ ಮಾಡಿ, ದುರಾಲೋಚನೆಯಿಂದ ಇವತ್ತಿನ ದಿವಸ ಹಾಲಿನ ಬೆಲೆಯನ್ನು ಹೆಚ್ಚಿಗೆ ಮಾಡಬೇಕಾದ ಅವಶ್ಯಕತೆ ಇದೆಯೆಂದು ತಮ್ಮ ಮೂಲಕ ಸರ್ಕಾರಕ್ಕೆ ನಾನು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ಬೆಲೆ ಏರಿಕೆ ದೃಷ್ಟಿಯಿಂದ ಮತ್ತು ಬೇರೆ ರಾಜ್ಯಕ್ಕೆ ಹೋಗತಕ್ಕ ಹಾಲನ್ನು ಅತಿ ಮುಖ್ಯವಾಗಿ ತಡೆದರೆ, ನಮಗೆ ವ್ಯವಸ್ಥಿತವಾಗಿ ಹಾಲು ದೊರೆಯುತ್ತದೆ. ಈ ರಾಜ್ಯಕ್ಕೆ ಹಾಲು ಹೆಚ್ಚು ಇಲ್ಲದಿರುವಾಗ, ಬೇರೆ ರಾಜ್ಯಕ್ಕೆ ಹಾಲು ಕೊಡುವುದು ಒಳ್ಳೆಯದಲ್ಲ. ಎರಡನೆಯದಾಗಿ, ಗೋಹತ್ಯೆ

ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ಕೇರಳ ಬಾರ್ಡರ್, ನಮ್ಮ ಗಡಿ ಪ್ರದೇಶ, ಗುಂಡ್ಲುಪೇಟೆ ದಾಟಿದರೆ, ಸುಮಾರು ಒಂದು ಗಂಟೆಯಲ್ಲಿ 500-600 ಹಸುಗಳು, ಒಂದುಕಡೆ ಲಾರಿ ನಿಲ್ಲಿಸುತ್ತಾರೆ, ಅದರಲ್ಲಿ ಎಂತಹ ಒಳ್ಳೆಯ ಹಸುಗಳನ್ನು, ಎತ್ತುಗಳನ್ನು, ಎಮ್ಮೆಗಳನ್ನು ಸಾಗಿಸುತ್ತಾರೆ. ಗೋಹತ್ಯೆ ನಿಷೇಧ ಕಾನೂನು ಇದ್ದರೂ ಸಹ ಇದನ್ನು ತೀವ್ರತರವಾಗಿ ಯಾರೂ ಜಾರಿಗೆ ತರುತ್ತಾ ಇಲ್ಲ. ಇದನ್ನು ಪರಿಣಾಮಕಾರಿಯಾಗಿ ಮಾಡುತ್ತಾ ಇಲ್ಲ. ಇದು ಸರ್ಕಾರಕ್ಕೆ ತಲೆಯಲ್ಲಿ ಇದೆಯೊ ಇಲ್ಲವೋ ಗೊತ್ತಿಲ್ಲ. ಹಿಂದೆ ತಮಿಳುನಾಡು ಸರ್ಕಾರದಲ್ಲಿ ಕರುಣಾನಿಧಿಯವರು ಮುಖ್ಯಮಂತ್ರಿಯಾಗಿದ್ದಾಗ, ಒಂದು ಕಾನೂನು ತಂದರು. ಎಲ್ಲಿಯವರೆಗೆ ತಂದರು ಎಂದರೆ, ಗಾಡಿ ಹೊಡೆಯತಕ್ಕ ಎತ್ತುಗಳು, ಇಷ್ಟೇ ಪ್ರಮಾಣದಲ್ಲಿ ಹೊರೆ ಹಾಕಬೇಕು ಇದಕ್ಕಿಂತ ಜಾಸ್ತಿ ಪ್ರಮಾಣದಲ್ಲಿ ಹೊರೆ ಹಾಕಿದರೆ ಕಾನೂನು ಪ್ರಕಾರ ಶಿಕ್ಷೆಗೆ ಒಳಗಾಗುತ್ತೀರಿ ಎಂಬ ಕಾನೂನನ್ನು ಕರುಣೆಯಿಂದ ತಂದರು. ಇಲ್ಲಿ ಕರುಣೆ ಪ್ರಶ್ನೆ ಇರಲಿ, ಎತ್ತುಗಳನ್ನು ಯಾವರೀತಿ ಹೊಡೆದುಕೊಂಡು ಹೋಗುತ್ತಾರೆ ಎಂಬುದನ್ನು ನೋಡಬೇಕು. ಒಂದರ ಕತ್ತಿನ ಹಿಂದೆ ಒಂದು ಚೈನ್ ಹಾಕುವ ಹಾಗೆ ಹಗ್ಗ ಕಟ್ಟುತ್ತಾರೆ. ಇಡೀ ರಸ್ತೆ ತುಂಬ ಒಂದು ನೂರು ಹಸುಗಳಿಗೂ ಒಂದೇ ಚೈನ್. ಅವುಗಳಿಗೆ ಮೇವು ಇಲ್ಲ. ಪ್ರತಿನಿತ್ಯ ಇದೇ ವ್ಯವಹಾರವಾಗಿದೆ. ನನ್ನ ಪ್ರಕಾರ, ಕರ್ನಾಟಕದಿಂದ, ಗಡಿ ಪ್ರದೇಶಗಳಲ್ಲಿ ಹೋಗತಕ್ಕ ದನಕರುಗಳು ಸುಮಾರು ಎರಡು ಸಾವಿರ, ಮೂರು ಸಾವಿರ. ಇದನ್ನು ತಡೆಯುವುದಕ್ಕೆ ಏನಾದರೂ ಮಾಡಿ, ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಗೋಹತ್ಯೆ ನಿಷೇದ, ಅದಕ್ಕೋಸ್ಕರ ಕಾನೂನು ಮಾಡುವುದರಲ್ಲಿ ಅರ್ಥವಿಲ್ಲ. ಕಾನೂನು ಇಟ್ಟುಕೊಳ್ಳುವುದಾದರೆ, ಆ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿ ಮಾಡಿ, ಇಲ್ಲದೇ ಹೋದರೆ, ಕಾನೂನು ತೆಗೆದುಹಾಕಿ. ಮನುಷ್ಯರಾದರೆ ಕೋರ್ಟಿಗೆ ಹೋಗುತ್ತಾರೆ. ಆದರೆ, ಮೂಕ ಪ್ರಣಿಗಳು ನ್ಯಾಯಾಲಯಕ್ಕೆ ಹೋಗುವ ಪ್ರಶ್ನೆ ಇಲ್ಲ. ಆದುದರಿಂದ ಇದನ್ನು ಪರಿಣಾಮಕಾರಿಯಾಗಿ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಿಂಧ್ಯರವರು, ಮತ್ತು ಮಾನ್ಯ ಭೈರೇಗೌಡರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಕಲ್ಕತ್ತಾಕ್ಕೆ ಸಾಗಣೆ ಆಗುವುದನ್ನು ನಿಲ್ಲಿಸಿದರೆ, ಹಾಲಿನ ಪೂರೈಕೆಯಲ್ಲಿ ಸುಧಾರಣೆಯಾಗುತ್ತದೆಂದು ಸೂಚನೆ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಹೈನುಗಾರಿಗೆ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ ಮತ್ತು ತಾವು ಹೇಳಿದ ಪ್ರಕಾರ, ನೀಲಗಿರಿ ಡೈರಿಯವರು ಹೆಚ್ಚು ಬೆಲೆ ಮಾಡುತ್ತಾರೆ, ಇದರಿಂದ ಗ್ರಾಹಕರಿಗೆ ತೊಂದರೆಯಾಗುತ್ತದೆ. ನೀಲಗಿರಿ ಡೈರಿಯವರಿಗೂ ಮತ್ತು ಗ್ರಾಹಕರಿಗೂ ಮಧ್ಯೆ ಕೆಲವು ಸಮತೋಲನ ನಡೆಯಬೇಕು. ಇದರ ಬಗ್ಗೆ ಸನ್ಮಾನ್ಯ ಸಚಿವರ ಹತ್ತಿರ ಹೇಳುತ್ತೇನೆ ಮತ್ತು ತಾವು ಏನು ಸೂಚನೆ ಕೊಟ್ಟಿದ್ದೀರಿ, ಅವುಗಳನ್ನು ಪರಿಶೀಲನೆ ಮಾಡೋಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಹಾಲಿನ ಥ್ರೋ ಅವೆ ಫ್ರೈಸ್ ಇದೆ....

ಶ್ರೀ ಸಿ. ಭೈರೇಗೌಡ : ಇವತ್ತು ಹಸುಗಳನ್ನು ಮತ್ತು ಎಮ್ಮೆಗಳನ್ನು ಮಾರಾಟ ಮಾಡುತ್ತಿದ್ದಾರೆ, ಹಾಲಿನ ಬೆಲೆಯನ್ನು ಹೆಚ್ಚು ಮಾಡಿದ್ದಾರೆ. ಇದು ಈಗಾಗಲೇ ಬ್ಯಾಲೆನ್ಸ್ ಆಗಿದೆ. ಅಂದರೆ, ರೈತರು ಈಗಾಗಲೇ ನಷ್ಟ ಅನುಭವಿಸುತ್ತಿದ್ದಾರೆ. ಇವತ್ತು ಒಳ್ಳೆಯ ಹಸುಗಳನ್ನೇ ಮಾರಾಟ ಮಾಡುತ್ತಿದ್ದಾರೆ. ಹಸುಗಳು, ಎಮ್ಮೆಗಳೂ ಮಾರಾಟವಾಗುತ್ತಿವೆ. ಕೇರಳ ಮತ್ತು ಬೆಂಗಳೂರು ಕಸಾಯಿಖಾನೆಗೆ ಬರುತ್ತಿದೆ. ಆದ್ದರಿಂದ ಹಾಲಿನ ಬೆಲೆಯನ್ನು ತಕ್ಷಣ ಹೆಚ್ಚು ಮಾಡತಕ್ಕಂಥ ಅಗತ್ಯ ಇದೆ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಸೂಚನೆಯನ್ನು ನಮ್ಮ ಸರ್ಕಾರ ಪರಿಶೀಲನೆ ಮಾಡುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ, ತೀವ್ರವಾಗಿ ಗೋವುಗಳನ್ನು ಹಿಂಸಾ ಸ್ವರೂಪದಲ್ಲಿ ಕಾಣುವಹಾಗೆ ಆಗುತ್ತಿದೆ ಎಂದು

ಹೇಳಿದ್ದಾರೆ. ಕಾನೂನಿನ ಪರಿಧಿಯಲ್ಲಿ ಏನು ಮಾಡಬೇಕು, ಆ ರೀತಿ ಇದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕ 1991

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ 1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಕನ್ನಡ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಹೇಳಿ ಈಗಾಲೇ ಸಾಕಷ್ಟು ಪ್ರಚಾರ ಆಗಿದೆ, ಪ್ರತ್ರಿಕೆಗಳಲ್ಲೂ ಕೂಡ ಬಂದಿದೆ. ಅದು ತಮಗೆ ಗೊತ್ತಿದೆ. ಇವರ ಪ್ರಾರಂಭ ಎಲ್ಲಿ ಆಯಿತು ಎಂದು ಹೇಳಿದರೆ ನಾವು 1980ನೇ ಇಸವಿಯಲ್ಲಿ ಒಂದು ಸಮಿತಿ ಮಾಡಿದ್ದೆವು. ಎಂ.ವಿ. ಕಾಮತ್ ಮತ್ತು ಇನ್ನಿತರ ಅನೇಕ ತಜ್ಞರು, ಹಂಪಿಯ ಬಗ್ಗೆ ಕನ್ನಡ ಸಂಸ್ಕೃತಿಯ ಬಗ್ಗೆ ಕಲೆಯ ಬಗ್ಗೆ ವಿಶೇಷವಾದ ಆಸಕ್ತಿ ಇರತಕ್ಕಂಥವರನ್ನು ಸೇರಿಸಿ ಈ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಿದಾಗ ಹಂಪಿ ಪುನರುಜ್ಜೀವನ ಅಥವಾ ಹಂಪಿ ರಿಸೆಲೆಕ್ಷನ್ ಪ್ರಾಜೆಕ್ಟ್ ಎಂದು ಮಾಡಿದಾಗ, ಒಂದು ಉನ್ನತವಾದಂಥ ಸಾಂಸ್ಕೃತಿಕ ಕೇಂದ್ರವನ್ನು ಹಂಪಿಯಲ್ಲಿ ಪ್ರಾರಂಭ ಮಾಡಬೇಕೆಂದು ಮಾಡಿ, ಆ ರೀತಿಯಲ್ಲಿ ಇದು ಪ್ರಾರಂಭವಾಯಿತು. ಸನ್ಮಾನ್ಯ ಸಿಂಧ್ಯಾರವರ ಒಂದು ಪಕ್ಷದ ಸರಕಾರ ಇದ್ದಾಗ, ಮಾಜಿ ಕುಲಪತಿಗಳಾದಂಥ ಸನ್ಮಾನ್ಯ ಸದಾಶಿವ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಅಥವಾ ಆಯೋಗ ಆಗಿ ಅವರು ಇದಕ್ಕೆ ಯಾವ ಸ್ವರೂಪ ಇರಬೇಕು ಎಂದು ವಿಚಾರ ಮಾಡಿ, ಆ ಸ್ವರೂಪದ ಬಗ್ಗೆ ಒಂದು ವರದಿಯನ್ನೂ ಕೂಡ ಕೊಟ್ಟರು. ಆ ವರದಿ ಪ್ರಕಟಣೆಯಾಗಿದೆ.

ಅದರ ಬಗ್ಗೆ ಕನ್ನಡದ ಜನತೆ ಸಾಕಷ್ಟು ತಿಳಿದುಕೊಂಡಿದ್ದಾರೆ. ನಾನು ವಿವರವಾಗಿ ಆಮೇಲೆ ಹೇಳುತ್ತೇನೆ. ಇಲ್ಲಿ ಪ್ರಾಸ್ತವಿಕವಾಗಿ ಕೆಲವು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವಿಚಾರ ಏನು ಬಂತು ಎಂದರೆ, ತಮಿಳುನಾಡಿನಲ್ಲಿ ಒಂದು ತಮಿಳು ವಿಶ್ವವಿದ್ಯಾನಿಲಯವನ್ನು ಮಾಡಿರುತ್ತಾರೆ, ಆಂಧ್ರದಲ್ಲಿ ತೆಲುಗು ವಿಶ್ವವಿದ್ಯಾನಿಲಯವನ್ನು ಮಾಡಿರುತ್ತಾರೆ, ಪ್ರಮುಖವಾದಂಥ ದ್ರಾವಿಡ ಭಾಷೆಗಳಿಗೆ ಅನ್ವಯವಾಗುವಂತೆ ಅಲ್ಲಿನ ಸಂಸ್ಕೃತಿಗೆ ಅನ್ವಯವಾಗುವಂತೆ ಮಾಡಿಕೊಂಡು ಎರಡು ವಿಶ್ವವಿದ್ಯಾನಿಲಯವನ್ನು ಅವರು ಮಾಡಿದರು.

ಅವರು ಮಾಡಿದರು ಎಂದು ನೀವು ಏತಕ್ಕೆ ಮಾಡುತ್ತೀರಿ ಎಂದು ಒಂದು ವಿವಾದ ನಮ್ಮ ಮುಂದೆ ಬಂದಿದೆ. ಪ್ರಶ್ನೆ ಎಂದರೆ ಎಲ್ಲರೂ ಮಾಡಿದ್ದು ಆದಮೇಲೆ ನಾವು ಮಾಡುವುದು. ಎಲ್ಲರಿಗಿಂತ ನಾವೇ ಮೊದಲು ಮಾಡಬೇಕಿತ್ತು ಎಂಬುದು. ನಾನು ಹೇಳುವಹಾಗೆ ಇದ್ದರೆ, ನಮ್ಮ ಭಾಷೆ ನಮ್ಮ ನಾಡು ಎಂದು ಅಭಿಮಾನದಿಂದ ಹೇಳತಕ್ಕದಲ್ಲ ಆದರೆ ನಿಜವಾಗಿ ಹೇಳುವ ಹಾಗೆ ಇದ್ದರೆ ಇವತ್ತು ಕರ್ನಾಟಕದ ಸಂಗೀತ ಎಂದು ನಾವು ಕೇಳುತ್ತೇವೆ. ಕರ್ನಾಟಕ ಸಂಗೀತ ಎಂದರೆ ತ್ಯಾಗರಾಜರದ್ದು ತೆಲುಗರದ್ದು ಎಂದು ಹೇಳುತ್ತೇವೆ ತಮಿಳರದ್ದು ಎಂದು ಹೇಳುತ್ತೇವೆ ಮೊದಲಿನಿಂದಲೂ ಅಲ್ಲಿ ಪ್ರಾಮುಖ್ಯವಾಗಿ ಪ್ರಾಧಾನ್ಯವಾಗಿ ಬೆಳೆದುಕೊಂಡು ಬಂದಿದೆ. ಇದು. ಆದರೆ